ಪಿ.ಡಬ್ಲ್ಯೂ- **1**

ಸಾಕ್ಷಿಯು ದಿನಾಂಕ- **18-12-2024** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀಸವಾಲು- ಎದುರುದಾರರ ಪರ ಶ್ರೀ ಎಸ್ ಎಂ ಬಿ ವಕೀಲರಿಂದ-</u>

ನಾನು ಡಿ.ಪ್ಲೊಮಾ ಇ ಆ್ಯಂಡ್ ಸಿ ಪಧವಿ ಪಡೆದಿರುತ್ತೇನೆ. ಎದುರುದಾರನ ಜೊತೆ ನಡೆದ ವಿವಾಹವು ಅರೇಂಜ್ಡ್ ಮ್ಯಾರೇಜ್ ಆಗಿರುತ್ತದೆ. ಎದುರುದಾರನ ವಿರುದ್ಧ ನಾನು ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯ ಹೊಸಪೇಟೆ ರಲ್ಲಿ ಎಂ.ಸಿ ನಂಃ **106/2023** ರಂತೆ ದಾಂಪತ್ಯ ಜೀವನ ಪುರ್ನಸ್ಥಾಪನೆಗಾಗಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಎದುರುದಾರರು ಹಾಜರಾಗಿದ್ದರು ಎಂದರೆ ಸರಿ. ಸದರಿ ಅರ್ಜಿ ಪುರಸ್ಕಾರಗೊಂಡಿರುತ್ತದೆ ಎಂದರೆ ಸರಿ. ನಂತರ ನಾವು ಅಮಲಜಾರಿ ಪ್ರಕರಣ ಸಂಖ್ಯೆ **17/2024** ರಂತೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಎದುರುದಾರರು ಹಾಜರಾಗಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಎದುರುದಾರರು ನನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತೇನೆ ಎಂದು ಮಾನ್ಯ ನ್ಯಾಯಾಲಯದಲ್ಲಿ ಒಂದು ಜ್ಞಾಪನೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವಇಚ್ಛೆಯಿಂದ ಅವರು ಕೆಲವು ಶರತ್ತುಗಳನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ರಾಜಿಸಂದಾನ ಮಾತು ಕತೆಯ ಪ್ರಯತ್ನ ಮಾಡಿರುತ್ತದೆ ಎಂದರೆ ಸರಿ. ಎದುರುದಾರರು ಈ ದಿನವು ಸಹ ನನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಸಂಸಾರ ನಡೆಸಲು ತಯಾರು ಇರುತ್ತಾರೆ ಎಂದರೆ ಸಾಕ್ಷಿಯು ತಾನು ಹೋಗಲು ತಾಯಾರಿರುತ್ತೇನೆ ಆದರೆ ಹಲವಾರು ಅಡೆತಡೆಗಳು ಇರುತ್ತವೆ ಎಂದು ನುಡಿಯುತ್ತಾರೆ. ಎದುರುದಾರರು ಯಾವುದೆ ಶರತ್ತುಗಳನ್ನು ಹಾಕದೆ ನನ್ನನ್ನು ಕರೆದುಕೊಂಡು ಹೋಗಲು ತಯಾರು ಇರುತ್ತಾರೆ ಎಂದರೆ ಸರಿಯಲ್ಲ.

**2.** ಈ ಪ್ರಕರಣದಲ್ಲಿ ಎದುರುದಾರರು ಸಲ್ಲಿಸಿರುವ ತಕರಾರನ್ನು ನಾನು ಓದಿ ತಿಳಿದುಕೊಂಡಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ನಾನು ಓದಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಳಾಸದಲ್ಲಿ ನಾನು ಈಗ ವಾಸವಿಲ್ಲ ಎಂದರೆ ಸರಿ. ದಿಃ **06.11.2024** ರಂದು ನಾನು ಸದರಿ ವಿಳಾಸದಲ್ಲಿ ವಾಸ ಇರಲಿಲ್ಲ

ಎಂದರೆ ಸರಿ. ಎಂ.ಸಿ ನಂಃ **106/2023** ಪ್ರಕರಣದಲ್ಲಿ ಸಹ ನಾನು ಅದೇ ವಿಳಾಸ ಕೊಟ್ಟಿದ್ದೆನು ಎಂದರೆ ಸರಿ. ಸಾಕ್ಷಿ ಮುಂದುವರೆದು ತಾನು ಬೇರೆ ವಿಳಾಸವನ್ನು ಸಹ ನೀಡಿದ್ದೆ ಎಂದು ನುಡಿಯುತ್ತಾರೆ. ಎದುರುದಾರರು ನನಗೆ ಕಳುಹಿಸಿದ ನೋಟಿಸ್ ನ್ನು ಅಮಲಜಾರಿ ಪ್ರಕರಣದ ನಂಃ **72/2024** ರಲ್ಲಿ ಹಾಜರುಪಡಿಸಿರುತ್ತಾರೆ ಎಂದರೆ ಇರಬಹುದು. ನಾನು ಈ ಪ್ರಕರಣವನ್ನು ದಾಖಲಿಸಿದ ನಂತರ ಎಂ.ಸಿ **106/2023** ದಾಖಲಿಸಿರುತ್ತೇನೆ.

**3.** ನಮ್ಮ ಮದುವೆ ಹುಬ್ಬಳ್ಳಿಯಲ್ಲಿ ಆಗಿತ್ತು ಎಂದರೆ ಸರಿ. ಮದುವೆಯನ್ನು ಎದುರುದಾರರು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಾನು ಹಾಲಿ ನನ್ನ ತಂದೆ ತಾಯಿ ಜೊತೆ ಇದ್ದೇನೆ ಎಂದರೆ ಸರಿ. ನಮ್ಮ ಮನೆಯಲ್ಲಿ ನನ್ನ ತಂದೆ ತಾಯಿ, ನನ್ನ ಸಹೋದರಿ ಮತ್ತು ನನ್ನ ಮಗಳು ಇರುತ್ತೇವೆ. ನನ್ನ ತಂದೆ ನಿವೃತ್ತ ಟಿಎಸ್‌ಪಿ ನೌಕರರಾಗಿರುತ್ತಾರೆ. ನನ್ನ ಸಹೋದರ ಬೆಂಗಳೂರನಲ್ಲಿ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಾರೆ. ನನ್ನ ಸಹೋದರಿಯ ಹೆಸರು ರೂಪಾವತಿ. ನನ್ನ ಸಹೋದರಿ ರೂಪಾವತಿಯವರು ತನ್ನ ಗಂಡನ ವಿರುದ್ಧ ಪ್ರಕರಣಗಳನ್ನು ದಾಖಲು ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆಯವರಿಗೆ ಮಾಸಿಕ ರೂ. **2000** ಪಿಂಚಣಿ ಬರುತ್ತದೆ. ನನ್ನ ತಂದೆ ಕೇಂದ್ರ ಸರ್ಕಾರದ ನೌಕರರಾಗಿದ್ದರು ಎಂದರೆ ಸರಿ. ನನ್ನ ತಂದೆಗೆ ರೂ. **2000** ಪಿಂಚಣಿ ಬರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವರಿಗೆ ಸುಮಾರು ರೂ. **50** ಸಾವಿರ ಪಿಂಚಣಿ ಬರುತ್ತದೆ ಎಂದರೆ ಸರಿಯಲ್ಲ.

**4.** ಎದುರುದಾರನ ವಿರುದ್ಧ ನಾನು ಭಾರತೀಯ ದಂಡ ಸಂಹಿತೆ ಕಲಂ **498** ಎ ರಡಿಯಲ್ಲಿ ಹುಬ್ಬಳ್ಳಿಯ ಮಹಿಳಾ ಪೋಲಿಸ ಠಾಣೆಯಲ್ಲಿ ದೂರು ದಾಖಲು ಮಾಡಿದ್ದೆ ಎಂದರೆ ಸರಿ. ಸದರಿ ಪ್ರಕರಣದ ವಿಚಾರಣೆಯು ಮಾನ್ಯ ಹುಬ್ಬಳ್ಳಿ ನ್ಯಾಯಾಲಯದಲ್ಲಿ ನಿನ್ನೇಯ ದಿನ ಇತ್ತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ರಾಜಿ ಸಂದಾನದ ಪ್ರಯತ್ನ ಮಾಡಿತ್ತು ಎಂದರೆ ಸರಿ. ನಾನು ಶರತ್ತುಗಳನ್ನು ಹಾಕದೆ ಎದುರುದಾರನ ಜೊತೆ ದಾಂಪತ್ಯ ನಡೆಸಲು ತಯಾರು ಇರುವುದಿಲ್ಲ. ಎದುರುದಾರನು ತನ್ನ ತಂದೆ ತಾಯಿಯನ್ನು ಬಿಟ್ಟು ಬೇರೆ ಮನೆ ಮಾಡಿದರೆ ನಾನು ಆತನ ಜೊತೆ ಹೋಗುವುದಾಗಿ ಶರತ್ತು ಹಾಕಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನ

ಸಹೋದರಿಯರು ನಮ್ಮ ಜೊತೆ ಇರುವುದು ಬೇಡ ಎಂದು ಶರತ್ತು ಹಾಕಿದ್ದೆ. ಎದುರುದಾರನ ಇಬ್ಬರು ಸಹೋದರಿಯರು ಅವಿವಾಹಿತರು ಎಂದರೆ ಸರಿ. ಅವರು ಎದುರುದಾರರಿಗಿಂತ ವಯಸ್ಸಿನಲ್ಲಿ ದೊಡ್ಡವರು ಇರುತ್ತಾರೆ ಎಂದರೆ ಸರಿ. ಎದುರುದಾರನ ತಂದೆಯ ವಯಸ್ಸು 90 ವರ್ಷಗಿಂತ ಹೆಚ್ಚು ಇರುತ್ತದೆ ಎಂದರೆ ಸರಿ. ಎದುರುದಾರನ ತಾಯಿ 85 ರಿಂದ 88 ವಯಸ್ಸಿನವರು ಎಂದರೆ ಸರಿಯಲ್ಲ. ಅವರದ್ದು 70 ವರ್ಷ ಇರಬಹುದು. ಆ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಎದುರುದಾರನು ಆತನ ತಂದೆ ತಾಯಿಗೆ ಒಬ್ಬನೇ ಮಗ ಇರುತ್ತಾನೆ ಎಂದರೆ ಸರಿಯಲ್ಲ. ಆತನಿಗೆ ನವೀನ್ ಎಂಬ ಒಬ್ಬ ಸಹೋದರ ಇರುತ್ತಾರೆ ಎಂದು ಸಾಕ್ಷಿ ಸ್ವಇಚ್ಛೆಯಿಂದ ನುಡಿಯುತ್ತಾರೆ. ನಾನು ಆ ರೀತಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನ ತಂದೆ ತಾಯಿಯ ಕಾಳಜಿ ಮತ್ತು ಆರೈಕೆಯನ್ನು ಮಾಡುವುದರಿಂದ ತಪ್ಪಿಸಿಕೊಳ್ಳಲು ನಾನು ನನ್ನ ತಂದೆ ತಾಯಿಯ ಮನೆಯಲ್ಲಿ ಸ್ವಇಚ್ಛೆಯಿಂದ ವಾಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಎದುರುದಾರನ ವಿರುದ್ಧ ಮಾಡಿರುವ ದೈಹಿಕ ಮತ್ತು ಮಾನಸಿಕ ಕಿರುಕುಳದ ಎಲ್ಲಾ ಆರೋಪಗಳು ಸುಳ್ಳು ಎಂದರೆ ಸರಿಯಲ್ಲ.

6. ಎದುರುದಾರರು ನನಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ನೀಡಿದ ಬಗ್ಗೆ ಯಾವುದೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವುಗಳಿಗೆ ಸಂಬಂದಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸಲು ತನಗೆ ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ನಾನು ನನಗೆ ಆದ ಕಿರುಕುಳದ ಬಗ್ಗೆ ಆಕಾಶ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಸದರಿ ದಾಖಲೆಗಳು ನನ್ನ ಬಳಿ ಇರುತ್ತವೆ. ಆ ರೀತಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ನಾನು ಸಲ್ಲಿಸಿರುವ ಆಸ್ತಿ ಮತ್ತು ಬಾಧ್ಯತೆಯ ಪ್ರಮಾಣ ಪತ್ರದಲ್ಲಿ ಪುಟ 2 ಖಂಡಿಕೆ ಸಿ ರಲ್ಲಿ ತೋರಿಸಿರುವಂತೆ ನನ್ನ ತಂದೆ ತಾಯಿ, ಇಬ್ಬರು ಸಹೋದರಿಯರು ಹಾಗೂ ಒಬ್ಬ ಸಹೋದರ ನನ್ನ ಮೇಲೆ ಅವಲಂಬಿತರಾಗಿರುವುದಿಲ್ಲ ಎಂದರೆ ಸರಿ. ಪುಟ ನಂಃ 3 ಖಂಡಿಕೆ ಜಿ ರಲ್ಲಿ ಹೇಳಿರುವಂತೆ ಎದುರುದಾರನ ತಿಂಗಳ ಸಂಬಸ 60 ಸಾವಿರ ಎಂದು ಸುಳ್ಳು ಹೇಳಿ ಬರೆಸಿರುತ್ತೇನೆ

ಎಂದರೆ ಸರಿಯಲ್ಲ. ಎದುರುದಾರನು ಬಾಡಿಗೆ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಎದುರುದಾರನಿಗೆ ಸ್ವಂತ ಮನೆ ಇದೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆ ಯಾರ ಹೆಸರಿಗೆ ಇದೆ ಎಂದು ನಿಖರವಾಗಿ ಗೊತ್ತಿಲ್ಲ. ಸದರಿ ಮನೆ ಆಸ್ತಿಯ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಹುಬ್ಬಳ್ಳಿಯಲ್ಲಿ ಎದುರುದಾರ ಮತ್ತು ಆತನ ತಂದೆ ತಾಯಿಯರಿಗೆ ನಾನು ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಯಾವುದೆ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

8. ಎದುರುದಾರನ ಇಬ್ಬರು ಸಹೋದರಿಯರು ಸುಮಾರು 50 ವರ್ಷದವರು ಎಂದರೆ ಸರಿ. ಎದುರುದಾರರು ತನ್ನ ಸಹೋದರಿಯ ವಿವಾಹಕ್ಕಾಗಿ ರೂ. 5 ಲಕ್ಷ ಹಣವನ್ನು ತರಲು ನನಗೆ ಹೇಳಿದ್ದರು ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾನು ಕ್ರಿಮಿನಲ್ ಪ್ರಕರಣದಲ್ಲಿ ಮತ್ತು ಎಂ.ಸಿ ನಂಃ 106/2023 ರಲ್ಲಿ ಹೇಳಿಲ್ಲ ಎಂದರೆ ಸರಿ. ಆ ರೀತಿ ನಾನು ಸುಳ್ಳು ಆರೋಪ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಎದುರುದಾರನ ಮದುವೆ ದಿಃ 12.02.2015 ರಲ್ಲಿ ಆಗಿರುತ್ತದೆ ಎಂದರೆ ಸರಿ. 2 ನೇ ಅರ್ಜಿದಾರರು 2016 ರಲ್ಲಿ ಜನಿಸಿರುತ್ತಾರೆ. ಹುಟ್ಟಿದಾಗಿನಿಂದಲೂ ಆಕೆ ನನ್ನ ತಂದೆ ತಾಯಿಯರ ಜೊತೆಯಲ್ಲಿಯೆ ಬೆಳೆದಿರುತ್ತಾಳೆ ಎಂದರೆ ಸರಿ. ನನ್ನ ಮಗಳಿಗೆ ನನ್ನ ತಂದೆ ತಾಯಿಯ ಜೊತೆಗೆ ಹೆಚ್ಚು ಒಡನಾಟ ಇದೆ ಎಂದರೆ ಸರಿ. ಎದುರುದಾರನ ಮನೆಯಲ್ಲಿ ನಾನು ವಾಸವಿದ್ದಾಗ 2 ನೇ ಅರ್ಜಿದಾರರ ಎಲ್ಲಾ ಖರ್ಚುಗಳನ್ನು ಎದುರುದಾರರು ಭರಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಎದುರುದಾರರು ಬೇರೆ ಬಾಡಿಗೆ ಮನೆ ಮಾಡಿಕೊಂಡು ಇದ್ದೆವು ಎಂದರೆ ಸರಿ. ಎದುರುದಾರನ ತಂದೆ ತಾಯಿ ಹಾಗೂ ಅವರ ಸಹೋದರಿಯರು ಬೇರೆ ಬಾಡಿಗೆ ಮನೆಯಲ್ಲಿ ಇದ್ದರು ಎಂದರೆ ಸರಿ. ನಾನು ಎದುರುದಾರನಿಗೆ ಹೇಳದೆ ಮನೆಯಿಂದ ಬಂದಿದ್ದೆನು ಎಂದರೆ ಸರಿಯಲ್ಲ. ಮೇ 2022 ರಂದು ನಾನು ಹೊಸಪೇಟೆಗೆ ಬಂದಿರುತ್ತೇನೆ.

9. ನನ್ನ ಮಗಳು ಹೊಸಪೇಟೆಯಲ್ಲಿ ಇದಿದ್ದರಿಂದ ನನ್ನ ಗಂಡನ ಮನೆಯಿಂದ ನಾನು ಹೆಚ್ಚಾಗಿ ಹೊಸಪೇಟೆಗೆ ಬರುತ್ತಿದ್ದೇನು ಎಂದರೆ ಸರಿ. ಕ್ರಿಮಿನಲ್ ಪ್ರಕರಣ ದಾಖಲು ಮಾಡಿದಾಗ

ನಾನು ಹಾಗೂ ಎದುರುದಾರರು ಬೇರೆ ಮನೆಯಲ್ಲಿ ಒಟ್ಟಾಗಿ ವಾಸಮಾಡುತ್ತಿದ್ದೇವು ಎಂದರೆ ಸರಿ. ಎದುರುದಾರರು ನನಗೆ ಯಾವುದೆ ಕಿರುಕುಳ ನೀಡದೆ ಇದ್ದರು ಸಹ ಅವರ ಹಾಗೂ ಅವರ ಮನೆಯವರ ವಿರುದ್ಧ ನಾನು ಸುಳ್ಳು ಆರೋಪಗಳನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಎದುರುದಾರನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡುವ ಹವ್ಯಾಸ ಬೆಳೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರನ ತಂದೆ ಅನಾರೋಗ್ಯದಿಂದ ಹಾಸಿಗೆ ಹಿಡಿದಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಓಡಾಡಲು ಶಕ್ತರಾಗಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನ ತಾಯಿ ಅನಾರೋಗ್ಯದಿಂದ ಹಾಸಿಗೆ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ಅವರ ವೈದ್ಯಕೀಯ ಖರ್ಚುಗಳನ್ನು ಎದುರುದಾರರು ಭರಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರು ಮನೆಯ ಬಾಡಿಗೆ, ಮನೆಯ ಖರ್ಚು, ತಂದೆ ತಾಯಿಯ ವೈದ್ಯಕೀಯ ಖರ್ಚುಗಳನ್ನು ಭರಿಸುತ್ತಿದ್ದಾರೆ ಎಂದರೆ ಸರಿಯಲ್ಲ.

**10.** ನನ್ನ ಅರ್ಜಿಯಲ್ಲಿ ನನ್ನ ಉದ್ಯೋಗವನ್ನು ಹೇಳಿ ಬರೆಸಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಹೊಸಪೇಟೆಯ ರೊಟರಿ ಶಾಲೆಯಲ್ಲಿ ಶಿಕ್ಷಕಿ ಎಂದು ಕೆಲಸ ಮಾಡುತ್ತಿದ್ದೆ. ಸಾಕ್ಷಿ ಮುಂದುವರೆದು ಈಗ ತಾನು ಕೆಲಸ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ಜುಲೈ 2024 ರಂದು ಕೆಲಸಕ್ಕೆ ಸೇರಿ ದಸರಾ ರಜೆಗಿಂತ ಮುಂಚೆ ಕೆಲಸ ಬಿಟ್ಟಿರುತ್ತೇನೆ. ನಾನು ಈಗಲೂ ಸಹ ರೊಟರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ ರೂ. 30 ಸಾವಿರ ಸಂಬಳ ಇದೆ ಎಂದರೆ ಸರಿಯಲ್ಲ. ನಾನು ಸದರಿ ವಿಚಾರವನ್ನು ಉದ್ದೇಶಪೂರ್ವಕವಾಗಿ ಮರೆಮಾಚಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಉದ್ಯೋಗದ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರೊಟರಿ ಶಾಲೆಯ ಯಾವುದೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**11.** ನಾನು ಎದುರುದಾರನ ಜೊತೆ ಹುಬ್ಬಳ್ಳಿಯಲ್ಲಿ ಇದ್ದಾಗ ಅಲ್ಲಿನ ಡಿಕೆ ಪಬ್ಲಿಕ್ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಸದರಿ ಕೆಲಸ ಮಾಡಿದ ಅನುಭವದ ಆಧಾರದ ಮೇಲೆ ನಾನು ಹೊಸಪೇಟೆಯಲ್ಲಿ ಸಹ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ

ಸರಿಯಲ್ಲ. ನಾನು ಶಿಕ್ಷಕಿಯಾಗಿ ಕೆಲಸ ಮಾಡುತ್ತಿರುವ ಕಾರಣ ಯಾವುದೆ ಜೀವನಾಂಶಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ. ಎದುರುದಾರರು ನನಗೆ ಹಲವಾರು ಬಾರಿ ದಾಂಪತ್ಯ ಜೀವನ ನಡೆಸಲು ಕರೆದಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಅರ್ಜಿದಾರರ ಉತ್ತಮ ಭವಿಷ್ಯಕ್ಕಾಗಿ ಜೊತೆಯಲ್ಲಿ ಜೀವನ ನಡೆಸಲು ಹಲವಾರು ಬಾರಿ ಎದುರುದಾರರು ನನಗೆ ಕರೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಕೆಲಸ ಮಾಡುತ್ತಿರುವ ಕಾರಣ ಎದುರುದಾರರು 2 ನೇ ಅರ್ಜಿದಾರರಿಗೆ ಜೀವನಾಂಶ ಕೊಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ಕಿರುಕುಳ ಹಾಗೂ ತೊಂದರೆ ಕೊಡುವ ಉದ್ದೇಶದಿಂದ ಅವರ ವಿರುದ್ಧ ನಾನು ಸುಳ್ಳು ಪ್ರಕರಣಗಳನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು, ಹೊಸಪೇಟೆ.